ವಿಶಾಖ ಎನ್.

# ಏನಾಗಿದೆ ಅಭಿಷೇಕ್, ಐಶ್ವರ್ಯಾ ಸಂಬಂಧಕ್ಕೆ?





'ಅಭಿಷೇಕ್ ಬಚ್ಚನ್ ಈಗ ಫೆರಾರಿ ಕಾರನ್ನು ಬಿಟ್ಟು ಟೊಯೊಟಾ ಕಾರಿನ ಹಿಂದೆ ಬಿದ್ದಿದ್ದಾರೆ'– ಹೀಗೊಂದು ಕುಚೇಷ್ಟೆಯ ಪೋಸ್ಟರ್ ಒಂದನ್ನು ಸಾಮಾಜಿಕ ಮಾಧ್ಯಮದಲ್ಲಿ ಕಿಡಿಗೇಡಿಗಳು ತೇಲಿಬಿಟ್ಟರು. ಐಶ್ವರ್ಯಾ ರೈ ಅವರಿಗೆ ವಿಚ್ಛೇದನ ನೀಡಿ, ನಟಿ ನಿಮ್ರತ್ ಕೌರ್ ಜೊತೆಯಲ್ಲಿ ಅಭಿಷೇಕ್ ಬಚ್ಚನ್ ಡೇಟಿಂಗ್ ಮಾಡುತ್ತಿದ್ದಾರೆ ಎನ್ನುವ ಗಾಳಿಸುದ್ದಿಯನ್ನೇ ಆಧರಿಸಿ ತಯಾರಾಗಿದ್ದ ಪೋಸ್ಟರ್ ಇದು.

ಈ ಸುದ್ದಿಯನ್ನು ಅಭಿಷೇಕ್ ಬಚ್ಚನ್ ಆಗಲೀ, ನಿಮ್ರತ್ ಆಗಲೀ, ಐಶ್ವರ್ಯಾ ಆಗಲೀ ಖಾತರಿಪಡಿಸಿಲ್ಲ. ಆದರೂ ಇದೊಂದೇ ವಿಷಯವನ್ನು ಇಟ್ಟುಕೊಂಡು ತರಹೇವಾರಿ ಸುದ್ದಿಗಳನ್ನು ಅಸಂಖ್ಯ ವೆಬ್‌ಸೈಟ್‌ಗಳು ಪ್ರಕಟಿಸುತ್ತಿವೆ. ಹಳೆಯ ಸಂದರ್ಶನಗಳಲ್ಲಿ ಈ ಮೂವರು ಆಯಾ ಕಾಲಘಟ್ಟಕ್ಕೆ ತಕ್ಕಂತೆ ಆಡಿರುವ ಮಾತುಗಳನ್ನು ಇಟ್ಟುಕೊಂಡು ವಿಶ್ಲೇಷಣೆ ನಡೆಸುತ್ತಿರುವವರೂ ಇಲ್ಲದೇ ಇಲ್ಲ.

'ದಸ್ವಿ' ಎನ್ನುವ ಸಿನಿಮಾದಲ್ಲಿ ನಿಮ್ರತ್ ಜೊತೆ ಅಭಿಷೇಕ್ ಅಭಿನಯಿಸುತ್ತಿದ್ದಾರೆ. ಈ ಜೋಡಿ ವಧು–ವರರ ದಿರಿಸಿನಲ್ಲಿ ಇರುವ ಫೋಟೊವೊಂದು ಮೊದಲು ಹರಿದಾಡಿತು. ಅದು ಸಿನಿಮಾ ಭಾಗವೋ ಅಥವಾ ಬೇರೆ ಯಾವುದೋ ಸಂದರ್ಭದಲ್ಲಿ ತೆಗೆಸಿಕೊಂಡಿರುವುದೋ ಎನ್ನುವ ಬಗ್ಗೆ ಸ್ಪಷ್ಟತೆಯನ್ನೂ ನೀಡದೆ, ಆ ಫೋಟೊ ಮೇಲೆ 'ಫೆರಾರಿ ಟೊಯೊಟಾ' ಎಂದೆಲ್ಲ ಬರೆದು ಪೋಸ್ಟ್‌ಗಳನ್ನು ಹರಿಯಬಿಟ್ಟರು.

ಐಶ್ವರ್ಯಾ ತಮ್ಮ ಕುಟುಂಬವರ್ಗದವರಿಗೆ ಈಚೆಗೆ ಔತಣಕೂಟ ಆಯೋಜಿಸಿದ್ದರು. ಅದಕ್ಕೆ ಗೈರುಹಾಜರಾದ ಅಭಿಷೇಕ್, ಅದೇ ಹೊತ್ತಿನಲ್ಲಿ ಅನಾರೋಗ್ಯಪೀಡಿತರಾಗಿದ್ದ ತಮ್ಮ ಅಜ್ಜಿಯನ್ನು ನೋಡಲು ಭೋಪಾಲ್‌ಗೆ ಹೋಗಿದ್ದರು. ಅಭಿಷೇಕ್ ಹಾಗೂ ಐಶ್ವರ್ಯಾ ಸಂಬಂಧ ಹಳಸಿರುವುದರಿಂದಲೇ ಅವರಿಬ್ಬರೂ ಒಟ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ ಎಂದು ಸುದ್ದಿ ವಿಸ್ತರಣೆಯೂ ನಡೆಯಿತು.

ಇಷ್ಟೆಲ್ಲ ಬೆಳವಣಿಗೆಗಳು ಆದ ನಂತರವೂ ಅಭಿಷೇಕ್ ಹಾಗೂ ಐಶ್ವರ್ಯಾ ನಡುವೆ ನಿಜಕ್ಕೂ ಏನಾಗಿದೆ ಎಂಬ ಸ್ಪಷ್ಟ ಚಿತ್ರಣ ಸಿಕ್ಕಿಲ್ಲ. ಯಾಕೆಂದರೆ, ಆ ವಿಷಯವನ್ನು ಅವರಿಬ್ಬರು ಅಥವಾ ಇಬ್ಬರಲ್ಲಿ ಒಬ್ಬರು ಹೇಳಬೇಕು. ■

# ಫೋಟೊಗ್ರಾಫರ್ಸ್‌ಗೆ ಕಂಡ ಖಡಕ್ ಡಿಂಪಲ್

'ನಾನು ಜೂನಿಯರ್ಸ್ ಜೊತೆ ಫೋಟೊ ತೆಗೆಸಿಕೊಳ್ಳುವುದಿಲ್ಲ'– ಡಿಂಪಲ್ ಕಪಾಡಿಯಾ ಹೀಗೆ ಹೇಳುತ್ತಿದ್ದಂತೆ, ಬೆಳಕು ಹೊಮ್ಮಿಸಲು ಸಜ್ಜಾಗಿದ್ದ ಕ್ಯಾಮೆರಾ ಫ್ಲ್ಯಾಷ್‌ಗಳಿಗೆ ಕೆಲಸ ಇಲ್ಲದಂತೆ ಆಯಿತು. ಅವರ ಮನ ಒಲಿಸುವ ಗೊಡವೆಗೆ ಹೋಗುವಷ್ಟು ಸಮಯವೂ ಫೋಟೊಗ್ರಾಫರ್‌ಗಳಿಗೆ ಇರಲಿಲ್ಲ.

'ಗೋ ನೋನಿ ಗೋ' ಎಂಬ ಸಿನಿಮಾದ ಪ್ರೀಮಿಯರ್ ಶೋ ಮುಂಬೈನಲ್ಲಿ ಇತ್ತು. ಅದಕ್ಕೆ ಟ್ವಿಂಕಲ್ ಖನ್ನಾ ಹಾಗೂ ಅಕ್ಷಯ್ ಕುಮಾರ್ ಕೂಡ ಬಂದಿದ್ದರು. ಆ ಸಿನಿಮಾದಲ್ಲಿ ಡಿಂಪಲ್ ಅಭಿನಯಿಸಿದ್ದಾರೆ. ಹೀಗಾಗಿ ಅವರ ಫೋಟೊ ತೆಗೆಯುವುದು ಫೋಟೊಗ್ರಾಫರ್ಸ್‌ಗಳಿಗೆ ಮುಖ್ಯವಾಗಿತ್ತು. ಫೋಟೊಗೆ ಪೋಸ್ ಕೊಡಲು ಅವರು ಒಂದೆಡೆ ನಿಂತರು. ಮುಗುಳುನಕ್ಕರು. ಅಷ್ಟಕ್ಕೇ ತೃಪ್ತರಾಗದ ಫೋಟೊಗ್ರಾಫರ್‌ಗಳು, ಅವರು ನಡೆದು ಸಾಗಿದಂತೆ ಹಿಂಬಾಲಿಸಿದರು. ಲಿಫ್ಟ್ ಎದುರು ನಿಂತು ಕಾಯತೊಡಗಿದರು. ಅದರ ಬಾಗಿಲು ತೆರೆದದ್ದೇ ಇನ್ನೊಂದು ಬೇಡಿಕೆ ಮುಂದಿಟ್ಟರು: 'ನಿಮ್ಮ ಮಗಳ ಜೊತೆ ಒಂದು ಫೋಟೊ ಬೇಕಿತ್ತು.' ತಕ್ಷಣವೇ ಡಿಂಪಲ್, 'ನಾನು ಜೂನಿಯರ್ಸ್ ಜೊತೆ ಫೋಟೊ ತೆಗೆಸಿಕೊಳ್ಳುವುದಿಲ್ಲ' ಎಂದು ಕಟುವಾಗಿ ಹೇಳಿಬಿಟ್ಟರು. ಅವರು ನಿರ್ಧಾರ ಬದಲಿಸಿಕೊಳ್ಳಬಹುದೇ ಎಂದು ತುಸು ಹೊತ್ತು ಫೋಟೊಗ್ರಾಫರ್‌ಗಳು ಕಾಯ್ದರೂ ಫಲ ಸಿಗಲಿಲ್ಲ.

ಡಿಂಪಲ್ ಕಟು ಹೇಳಿಕೆಯ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದೆ. ಅದಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೆಲವರು, 'ಇನ್ನೊಬ್ಬ ಜಯಾ ಬಚ್ಚನ್ ತರಹ ಆಡುತ್ತಾರೆ ಈಕೆ' ಎಂದು ಪ್ರತಿಕ್ರಿಯಿಸಿದ್ದಾರೆ. ಇನ್ನು ಕೆಲವರು, ಬೆನ್ನುಹತ್ತುವ ಫೋಟೊಗ್ರಾಫರ್‌ಗಳಿಗೆ ಅವರು ತಕ್ಕ ಪಾಠ ಮಾಡಿದ್ದಾರೆ ಎಂದೂ ಬರೆದಿದ್ದಾರೆ.

ಮುಂಬೈ ಅಕಾಡೆಮಿ ಆಫ್ ದಿ ಮೂವಿಂಗ್ ಇಮೇಜ್ (ಮಾಮಿ)– ಮುಂಬೈ ಫೆಸ್ಟಿವಲ್ 2024 ಭಾಗವಾಗಿ 'ಗೋ ನೋನಿ ಗೋ' ಚಿತ್ರವು ಪ್ರದರ್ಶಿತಗೊಂಡಿತು. ಡಿಂಪಲ್ ಫೋಟೊಗೆ ಪೋಸ್ ಕೊಡಲು ಒಪ್ಪದೇ ಇದ್ದರೇನಂತೆ, ಅಕ್ಷಯ್ ಕುಮಾರ್ ಹಾಗೂ ಟ್ವಿಂಕಲ್ ಖನ್ನಾ ಅಪರೂಪಕ್ಕೆ ಹೊರಗೆ ಒಟ್ಟಾಗಿ ಕಾಣಿಸಿಕೊಂಡಿದ್ದರಿಂದ ಅವರ ಮೇಲೆಯೇ ಕ್ಯಾಮೆರಾಗಳು ಬೆಳಕು ಚೆಲ್ಲತೊಡಗಿದವು. ■

